ಆ 1994-95 212 ಮನೆಗಳು

1995-96 96 ಮನೆಗಳು

96 ರ ಜೂನ್ ಅಂತಕ್ಕೆ 99 ಮನೆಗಳು ವಿವಿಧ ಹಂತದಲ್ಲಿವೆ.

ಶ್ರೀ ಅಲ್ಲಂ ವೀರಭದ್ರಪ್ಪ :- ಮಾನ್ಯ ಉಪಾಧ್ಯಕ್ಷರೇ, 1994-95, 1995-96 ನೇ ಇಸವಿಗಳಲ್ಲಿ ಆಶ್ರಯ ಮನೆಗಳನ್ನು ನಿರ್ಮಿಸಿರುವ ಬಗ್ಗೆ ನೋಡಿದಾಗ 1994-95 ರಲ್ಲಿ ಸುಮಾರು 40 ಸಾವಿರ ಮನೆಗಳನ್ನು, 1995-96 ರಲ್ಲಿ 25 ಸಾವಿರ ಮನೆಗಳನ್ನು ಕಟ್ಟಿದ್ದಾರೆ. ಅದೇ ನನ್ನ ಕ್ಷೇತ್ರದಲ್ಲಿ 1994-95 ರಲ್ಲಿ 212 ಮನೆಗಳು, 1995-96 ರಲ್ಲಿ 96 ಮನೆಗಳನ್ನು ಕಟ್ಟಲಾಗಿದೆ. ಆದರೆ ಗುರಿ 600 ಮನೆಗಳಾಗಿತ್ತು. ಇಲ್ಲಿ ಅನ್ಯಾಯವಾಗಿದೆ ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರೇನು ಅವರ ಕ್ಷೇತ್ರದಲ್ಲಿ 500 ಮನೆಗಳು 1994 ರಲ್ಲಿ ಆಗಬೇಕಾಗಿತ್ತು ಅದರಲ್ಲಿ 96 ಮನೆಗಳು ಮಾತ್ರ ಕಟ್ಟಿದ್ದಾರೆಂದು ಹೇಳಿದ್ದಾರೆ. 1994-95 ರಲ್ಲಿ ರಾಜ್ಯದಲ್ಲಿ 1 ಲಕ್ಷ 50 ಸಾವಿರ ಮನೆ ಕಟ್ಟುವ ಗುರಿ ಇತ್ತು. ಆದರೆ ವಿಧಾನಸಭೆಯ ಚುನಾವಣೆ ನಡೆದ ಪ್ರಯುಕ್ತ ಮತ್ತು ಕೇವಲ ಹತ್ತು ಕೋಟಿ ಹಣವನ್ನು ಮಾತ್ರ ಅದಕ್ಕೆ ಇಡಲಾಗಿತ್ತು. ಅಷ್ಟೂ ಮನೆಗಳನ್ನು ಕಟ್ಟಲು ಇನ್ನೂರು ಕೋಟಿ ರೂಪಾಯಿ ಬೇಕಾಗಿತ್ತು. ಆ ಯೋಜನೆಯಲ್ಲಿ ಹಣವಿಲ್ಲದ್ದರಿಂದ 1994-95 ರ ಸಾಲಿನ ಮನೆಗಳನ್ನು ಗುರಿಯಷ್ಟು ಕಟ್ಟಲು ಆಗಲಿಲ್ಲ. 1995-96 ರಲ್ಲಿ ಗ್ರಾಮೀಣ ಪ್ರದೇಶಕ್ಕೆ 60 ಸಾವಿರ ಮನೆಗಳನ್ನು ಕೊಡಬೇಕೆಂದು 18-8-1995 ರಲ್ಲಿ ತೀರ್ಮಾನ ಮಾಡಲಾಗಿದೆ. 1995-96 ನೇ ಸಾಲಿನ ಮನೆಗಳನ್ನು ಪೂರ್ಣ ಮಾಡಿಸಿಕೊಡುತ್ತೇವೆ. 1994-95 ನೇ ಸಾಲಿನ ಗುರಿಯನ್ನು ಮುಟ್ಟಲು ಆಗುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ :- ನಮ್ಮ ಕ್ಷೇತ್ರದಲ್ಲಾಗಿರುವ ಅನ್ಯಾಯವನ್ನು ಸಂಪದಿಸುತ್ತಾರೆಯೇ?

ಶ್ರೀ ಹೆಚ್. ಡಿ. ರೇವಣ್ಣ :- ಈ ವರ್ಷ ಏನು ಕೆಲಸ ಮಾಡಬೇಕಾಗಿದೆಯೋ ಅದನ್ನು ಕಾನೂನಿನ ಪ್ರಕಾರ ಸರಿಪಡಿಸುತ್ತೇನೆ.

ವಿಷಯ :- ಕೆಂಗೇರಿ ಉಪನಗರದಲ್ಲಿ ಗೃಹ ಮಂಡಳಿ ಮನೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 234 (1231)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆಂಗೇರಿ ಉಪನಗರದಲ್ಲಿ ಕರ್ನಾಟಕ ಗೃಹಮಂಡಳಿಯು ವಿವಿಧ ಹಂತಗಳಲ್ಲಿ ನಿರ್ಮಿಸಿರುವ ಫ್ಲಾಟ್‌ಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಎಷ್ಟು ಫ್ಲಾಟ್‌ಗಳನ್ನು ಹಂಚಲಾಗಿದೆ.

ಇ) ಇನ್ನೂ ಎಷ್ಟು ಫ್ಲಾಟ್‌ಗಳು ಖಾಲಿ ಇವೆ?

ಈ) ಈಗಾಗಲೇ ಈ ಫ್ಲಾಟ್‌ಗಳಲ್ಲಿ ವಾಸ ಮಾಡುತ್ತಿರುವವರಿಗೆ ಸಾರ್ವಜನಿಕ ಸೌಲಭ್ಯಗಳಾದ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ರಸ್ತೆ ಬೀದಿ ದೀಪ ಇತ್ಯಾದಿ ಒದಗಿಸಲಾಗಿದೆಯೇ?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :-

ಅ) ಕೆಂಗೇರಿ 3 ನೇ ಹಂತದಲ್ಲಿ ವಿವಿಧ ವರ್ಗದ 2524 ಮನೆಗಳನ್ನು ನಿರ್ಮಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ಮನೆಯ ವರ್ಗ	ಎಲ್‌ಐಜಿ-ಎ	ಎಂಐಜಿ-ಬಿ	ಎಂಐಜಿ-ಎ	ಎಂಐಜಿ-ಬಿ	ಎಂ.ಐ.ಜಿ-ಸಿ	ಹೆಚ್‌ಐಜಿ ಎ	ಹೆಚ್‌ಐಜಿ ಬಿ	
ಕಟ್ಟಿರುವ ಮನೆಗಳ ಸಂಖ್ಯೆ	480	140	552	448	376	224	304	25
ಇವುಗಳ ಪೈಕಿ 2089 ಫ್ಲಾಟ್‌ಗಳನ್ನು ಹಂಚಿಕೆ ಮಾಡಲಾಗಿದೆ.	382	106	406	349	362	205	279	266
ಹಂಚಿಕೆಗಾಗಿ ಉಳಿದಿರುವ ಫ್ಲಾಟ್‌ಗಳ ಸಂಖ್ಯೆ	108	34	146	99	14	9	25	

ಈ) ಕುಡಿಯುವ ನೀರಿನ ವ್ಯವಸ್ಥೆ ಮತ್ತು ಒಳಚರಂಡಿ ವ್ಯವಸ್ಥೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ರೂ. 308 -00 ಲಕ್ಷಗಳನ್ನು ಪಾವತಿ ಮಾಡಿ ವಹಿಸಿಕೊಡಲಾಗಿದೆ. ಸದರಿ ಮಂಡಳಿಯು ನೀರುಸರಬರಾಜಿಗೆ ಅವಶ್ಯಕವಾದ ಪಂಪ್ ಆಳವಡಿಕೆಯ ವಿನಃ ಎಲ್ಲಾ ಕೆಲಸಗಳನ್ನು ಪೂರ್ಣಗೊಳಿಸಿದೆ.

ಮನೆಗಳ ನಿವಾಸಿಗಳಿಗೆ ಕರ್ನಾಟಕ ಗೃಹ ಮಂಡಳಿ ವತಿಯಿಂದ ತಾತ್ಕಾಲಿಕವಾಗಿ ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಇನ್ನು 2 ತಿಂಗಳಲ್ಲಿ ಜಲಮಂಡಳಿಯಲ್ಲಿ ಸಂಪೂರ್ಣವಾಗಿ ನೀರು ಸರಬರಾಜು ಮಾಡಲು ಕಾರ್ಯವನ್ನು ಪೂರ್ಣಗೊಳಿಸುವುದಾಗಿ ತಿಳಿಸಿದೆ.

ವಿದ್ಯುಚ್ಛಕ್ತಿ ಸರಬರಾಜಿಗೆ ಅವಶ್ಯಕವಾದ ಎಲ್ಲಾ ಕೆಲಸಗಳು ಮುಗಿದಿವೆ.

ಮನೆಗಳಿಗೆ ವಿದ್ಯುಚ್ಛಕ್ತಿ ಸರಬರಾಜಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅವಶ್ಯಕವಾದ ಅನುಮತಿ ಬರಬೇಕಾಗಿದೆ. ಮನೆಗಳ ನಿವಾಸಿಗಳಿಗೆ ತಾತ್ಕಾಲಿಕವಾಗಿ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗುತ್ತಿದೆ.

ಮುಖ್ಯ ರಸ್ತೆಗೆ ಜಲ್ಲಿ ಹರಡಿ ಡಾಂಬರೀಕರಣ ಮಾಡಲಾಗಿದೆ. ಒಳ ರಸ್ತೆಗಳಿಗೆ ಜಲ್ಲಿ ಹರಡಿ ಡಾಂಬರೀಕರಣದ ಬಗ್ಗೆ ಟೆಂಡರ್ ಕರೆಯಲಾಗಿದೆ.

ಒಳಚರಂಡಿ ವ್ಯವಸ್ಥೆಯ ಕೆಲಸಗಳು ಈಗಾಗಲೇ ಮುಗಿದಿದ್ದು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ. ಬೀದಿ ದೀಪ ವ್ಯವಸ್ಥೆಯನ್ನು ಮಾಡಲಾಗಿದ್ದು ಸಮರ್ಪಕವಾಗಿ ನಿರ್ವಹಿಸುತ್ತಿದೆ.

ಮನೆಗಳನ್ನು ಸ್ವಾಧೀನಕ್ಕೆ ಕೊಡುವಾಗ ತಾತ್ಕಾಲಿಕವಾಗಿ ನೀರು, ವಿದ್ಯುಚ್ಛಕ್ತಿ ಸೌಲಭ್ಯಗಳನ್ನು ಈಗಾಗಲೇ ನೀಡಲಾಗಿದೆ. ಖಾಯಂ ವ್ಯವಸ್ಥೆಯನ್ನು ಆದಷ್ಟು ಶೀಘ್ರದಲ್ಲಿ ಮಾಡಲಾಗುವುದು.

ಶ್ರೀ ರಾಮಲಿಂಗಾರೆಡ್ಡಿ :- ಮಾನ್ಯ ಉಪಾಧ್ಯಕ್ಷರೇ, ಕೆಂಗೇರಿ ಉಪನಗರದಲ್ಲಿ ಸುಮಾರು ನಾಲ್ಕು ವರ್ಷಗಳ ಹಿಂದೆ 2524 ಮನೆಗಳನ್ನು ಕಟ್ಟಲು ಪ್ರಾರಂಭ ಮಾಡಿದರು. ಈಗಾಗಲೇ 2089 ಮನೆಗಳು ಪೂರ್ಣಗೊಂಡಿದ್ದು ಅದನ್ನು ಫಲಾನುಭವಿಗಳಿಗೆ ಕೊಟ್ಟಾಗಿದೆ. ಆದರೆ ಉಳಿದ 435 ಮನೆಗಳು ಪೂರ್ಣವಾಗಿಲ್ಲ. ಇದನ್ನು ಯಾವಾಗ ಪೂರ್ಣ ಮಾಡುತ್ತಾರೆ? ನಾಲ್ಕು ವರ್ಷಗಳ ಹಿಂದೆ ಪ್ರಾರಂಭವಾಗಿದ್ದರೂ ಇದುವರೆಗೆ ಏಕೆ ಆ ಮನೆಗಳು ಪೂರ್ಣವಾಗಿಲ್ಲ? ಈ ಮನೆಗಳಿಗೆ ಏನೇನು ಅವಶ್ಯಕತೆ ಇರುವ ಅನುಕೂಲತೆಗಳನ್ನು ಕೊಟ್ಟಿದ್ದೀರೆಂದು ಕೇಳಿದ್ದಕ್ಕೆ ಸಚಿವರು ವಿವರವಾಗಿ ಮಾಹಿತಿಯನ್ನು ಕೊಟ್ಟಿದ್ದಾರೆ. ನೀರನ್ನು ಒದಗಿಸುವುದಕ್ಕೆ 3.8 ಕೋಟಿ ಹಣವನ್ನು ಕೊಟ್ಟಿದ್ದೇವೆ, ಎಲ್ಲಾ ಕೆಲಸವಾಗಿದೆ ಇನ್ನು ಎರಡು ಮೂರು ತಿಂಗಳಿನೊಳಗಾಗಿ ನೀರನ್ನು ಕೊಡುವುದಾಗಿ ಹೇಳಿದ್ದಾರೆ. ತಕ್ಷಣಕ್ಕೆ ಬೋರ್‌ವೆಲ್‌ನಿಂದ ಆದೂ ವಾರಕ್ಕೆ ಒಂದು ಸಾರಿ ನೀರನ್ನು ಕೊಡುತ್ತಿದ್ದಾರೆ. ಆ ಎರಡು ಸಾವಿರ ಮನೆಗಳಿಗೆ ವಾರಕ್ಕೆ ಒಮ್ಮೆ ಇಲ್ಲವೆ ಎರಡು ಸಾರಿ ಆ ರೀತಿ ನೀರನ್ನು ಕೊಟ್ಟರೆ ಹೆಚ್ಚು ಎಂದು ಕಾಣುತ್ತದೆ. ನೀರನ್ನು ಒದಗಿಸುವ ಕೆಲಸ ತಕ್ಷಣವಾಗಬೇಕು. ಮುಖ್ಯ ರಸ್ತೆಗೆ ಡಾಂಬರನ್ನು ಹಾಗಿ ಕ್ರಾಸ್ ರಸ್ತೆಗಳಿಗೆ ಹಾಕಿಲ್ಲ, ಅದಕ್ಕೆ ಟೆಂಡರ್ ಕರೆದಿದ್ದೇವೆಂದು ಹೇಳಿದ್ದಾರೆ. ಮತ್ತು ಆ ಮನೆಗಳಿಗೆ

ಎ.ಇ.ಹೆಚ್. ಸೌಲಭ್ಯವಂತೂ ಇಲ್ಲವೇ ಇಲ್ಲ. ತಾತ್ಕಾಲಿಕವಾಗಿ ವಿದ್ಯುತ್ ದೀಪಕ್ಕೆ ಮಾತ್ರ ಅವಕಾಶ ಮಾಡಿಕೊಟ್ಟಿದ್ದಾರೆ. ಐ.ಇ.ಹೆಚ್. ಇಲ್ಲದೆ ಸುಮಾರು 2 ಸಾವಿರ ಮನೆಗಳಿಗೆ ಬಹಳ ತೊಂದರೆಯಾಗುತ್ತಿದೆ. ಈ ಎಲ್ಲಾ ಕೆಲಸಕಾರ್ಯಗಳನ್ನು ಆದಷ್ಟು ಬೇಗ ಮುಗಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೇ, 458 ಮನೆಗಳನ್ನೇನು ಬಾಕಿ ಕಟ್ಟಬೇಕಾಗಿದೆ ಅದನ್ನು ಒಂದು ತಿಂಗಳಿನಲ್ಲಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ ಕುಡಿಯುವ ನೀರು ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸಲು ಕೆ.ಡಬ್ಲ್ಯೂ.ಎಸ್. ಮತ್ತು ವಿದ್ಯುಚ್ಛಕ್ತಿ ಇಲಾಖೆಗೆ ವಹಿಸಲಾಗಿತ್ತು. ಅವರು ಕೆಲಸ ಮಾಡಿಲ್ಲ. ಈಗ ಟಿಂಪರ್‌ವರಿ ಆಧಾರದ ಮೇಲೆ ವಿದ್ಯುತ್‌ನ್ನು ಒದಗಿಸಲಾಗುತ್ತಿದೆ. ಹದಿನೈದು ದಿವಸ ಗಳಲ್ಲಿ ಶಾಶ್ವತ ವಿದ್ಯುತ್ ವ್ಯವಸ್ಥೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಸಭಾಧ್ಯಕ್ಷರೇ, ಕೆಂಗೇರಿಯಲ್ಲಿ ಗೃಹ ಮಂಡಳಿ ಏನು ಮನೆಗಳನ್ನು ಕಟ್ಟಿದೆ, ಆ ಮನೆಗಳನ್ನು ಕಟ್ಟಿದೆ, ಆ ಮನೆಗಳನ್ನು ಕಟ್ಟುವ ಬಗ್ಗೆ ನೋಟಿಫಿಕೇಷನ್ ಕೊಟ್ಟಾಗ ಇರತಕ್ಕ ದರ, ಹಂಚಿಕೆ ಮಾಡಿದಾಗ ಇದ್ದ ದರ ಮತ್ತು ಈಗ ಅವರನ್ನು ಕೇಳುತ್ತಿರುವ ದರದಲ್ಲಿ ಬಹಳ ಹೆಚ್ಚಳ ಆಗಿದೆ. ಕೆಲವು ಸಲ ಶೇಕಡ 100 ರಷ್ಟು ಹೆಚ್ಚಳ ಆಗಿದೆ. ಹಂಚಿಕೆದಾರರ ಯಾವುದೇ ತಪ್ಪಿಲ್ಲದೇ ಇದ್ದರೂ ಕೂಡ, ಅವರ ಮೇಲೆ ಈ ರೀತಿ ಹೊರೆ ಏರಿಸುತ್ತಿರುವುದರ ಕಾರಣವೇನು? ದಯವಿಟ್ಟು ಆ ಹೊರೆಯನ್ನು ಇಳಿಸಲಿಕ್ಕೆ ಏನಾದರೂ ಸರ್ಕಾರ ಪ್ರಯತ್ನ ಮಾಡುತ್ತದೆಯೇ?

ಶ್ರೀ ಹೆಚ್. ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೇ, ಕೆಂಗೇರಿಯಲ್ಲಿ ಏನು ಗೃಹಮಂಡಳಿ ಮನೆಗಳನ್ನು ಅಲಾಟ್ ಮಾಡಲಾಗಿದೆ, ಅವುಗಳ ಬೆಲೆಯಲ್ಲಿ ಶೇಕಡ 66 ರಷ್ಟು ಹೆಚ್ಚಳವಾಗಿರುವುದು ನಿಜ. ಅದರಲ್ಲಿ ಶೇಕಡ 30 ರಷ್ಟು ಡಿಪಾರ್ಟ್‌ಮೆಂಟಿನ ಕಾಮಗಾರಿ ಕೆಲಸಗಳಿಂದ ಹೆಚ್ಚಳವಾಗಿದೆ. ಮೊದಲು ಲೈನ್ ಎಸ್ಟಿಮೇಟ್ ಮಾಡಿದರು. ಈಗ ಅದನ್ನು ಶೇಕಡ 30 ರಷ್ಟು ಕಾನೂನು ಬದ್ಧವಾಗಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಇನ್ನು ಶೇಕಡ 33 ರಷ್ಟು ಎಲೆಕ್ಟ್ರಿಸಿಟಿ ಮತ್ತು ಕುಡಿಯುವ ನೀರಿನ ವ್ಯವಸ್ಥೆಯಿಂದಾಗಿ ಜಾಸ್ತಿಯಾಗಿದೆ. ಅದರಲ್ಲಿ ಲೋಪದೋಷಗಳೇನಾದರೂ ನಡೆದಿರುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ ಅದನ್ನು ನನಗೆ ತಿಳಿಸಿ, ನಾನು ಅದರ ಬಗ್ಗೆ ತನಿಖೆಯನ್ನು ನಡೆಸಲಿಕ್ಕೆ ತಯಾರಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಹಂಚಿಕೆದಾರರದು ಏನೂ ತಪ್ಪಿಲ್ಲ. ತಪ್ಪು ಇದ್ದದ್ದು ಗೃಹ ಮಂಡಳಿಯದು. ಈಗ ನಾನು ಲೋ ಇನ್‌ಕಮ್ ಗ್ರೂಪ್ ಮನೆ ಎಂದು ತೆಗೆದುಕೊಳ್ಳುತ್ತೇನೆ, ಇವರು ಹೈ ಇನ್‌ಕಮ್ ಗ್ರೂಪ್ ರೇಟ್ ಹಾಕಿದರೆ ನಾನು ಹೇಗೆ ಆ ಹಣ ಕೊಡುವುದಕ್ಕೆ ಸಾಧ್ಯ? ನಾನು ಮನೆಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಇವತ್ತು ನಾನು ಆ ಮನೆಯನ್ನು

ಮಾರಿ ಬಿಟ್ಟು ಇವರಿಗೆ ದುಡ್ಡು ಕೊಟ್ಟು, ಸರ್ಟಿಫಿಕೇಟ್ ತೆಗೆದುಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಹಂಚಿಕೆದಾರನ ತಪ್ಪಿಲ್ಲದೇ, ಗೃಹ ಮಂಡಳಿ ಅವನ ಮೇಲೆ ಯಾವ ರೀತಿ ಭಾರ ಹಾಕುತ್ತದೆ. ಅದು ನನ್ನ ಪ್ರಶ್ನೆಯಾಗಿದೆ.

ಶ್ರೀ ಹೆಚ್. ಡಿ. ರೇವಣ್ಣ :- ಪ್ರತಿ ವರ್ಷವೂ ಎಸ್ಟಿಮೇಟ್‌ಗಳು ಜಾಸ್ತಿಯಾಗುತ್ತಿರುತ್ತದೆ. ಅದರ ರೇಟ್ ಬಗ್ಗೆ ನಿಮಗೇ ಗೊತ್ತಿದೆ. ಅದರಲ್ಲಿ ಏನಾದರೂ ಲೋಪದೋಷಗಳು ಇದ್ದು ನಿಮ್ಮ ಗಮನಕ್ಕೆ ಬಂದಿದ್ದಲ್ಲಿ ಅವುಗಳ ಬಗ್ಗೆ ತಿಳಿಸಿದರೆ ನಾನು ಅವುಗಳನ್ನು ಸರಿಪಡಿಸಿಕೊಡುತ್ತೇನೆ. ಪ್ರತಿವರ್ಷವೂ ಇಂತಹ ಕಾಮಗಾರಿಗಳಲ್ಲಿ ರೇಟ್‌ಅನ್ನು ಹೆಚ್ಚು ಮಾಡುತ್ತಲೇ ಇರುತ್ತಾರೆ. ಪಿ.ಡಬ್ಲ್ಯೂ.ಡಿ. ಇಲಾಖೆ ಇರಲಿ, ನೀರಾವರಿ ಇಲಾಖೆ ಇರಲಿ ಅಥವಾ ಭೂ ಮಂಡಳಿ ಇರಲಿ, ಗೃಹ ಮಂಡಳಿ ಇರಲಿ ಎಲ್ಲದರಲ್ಲೂ ಪ್ರತಿ ವರ್ಷ ಎಸ್ಟಿಮೇಟ್ ಕಾಸ್ಟ್ ಜಾಸ್ತಿಯಾಗುತ್ತಾ ಇರುತ್ತದೆ. 1991 ನೇ ಇಸವಿಯಲ್ಲಿ ಇದು ಕೆಲಸ ಮಾಡಿರುವುದು. ಪ್ರತಿ ವರ್ಷ ಎಸ್ಟಿಮೇಟ್ ಕಾಸ್ಟ್ ಜಾಸ್ತಿ ಆಗುತ್ತಾ ಇರುವುದರಿಂದ ನಾವೇನೂ ಮಾಡುವುದಕ್ಕಾಗುವುದಿಲ್ಲ.

ವಿಷಯ :- ಕಾಫಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 235 (1025)

ಶ್ರೀ ಎಂ. ಸಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾಫಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲಾಗುವುದೇ ;

ಆ) ಹಾಗಿದ್ದಲ್ಲಿ ಯಾವಾಗ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :-

ಅ) ಪರಿಶೀಲಿಸಲಾಗುತ್ತಿದೆ.

ಆ) ಆದಷ್ಟು ಬೇಗ.

ಶ್ರೀ. ಬಿ. ಬಿ. ಶಿವಪ್ಪ :- (ಶ್ರೀ ಎಂ. ಅಪ್ಪಚ್ಚು ರಂಜನ್‌ಅವರ ಪರವಾಗಿ) ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಏನೋ ಕೊಟ್ಟಿದ್ದಾರೆ. ಆದರೆ ಕನ್ನಡ ಭಾಷೆಯಲ್ಲಿರುವ ಉತ್ತರದಲ್ಲಿ 'ಕಾಫಿ ಅಕ್ರಮ ಸಾಗುವಳಿ' ಎಂದು ಹಾಕಿದ್ದಾರೆ. ಇಂಗ್ಲೀಷ್ ಭಾಷೆಯಲ್ಲಿ ಒದಗಿಸಿರುವ ಉತ್ತರದಲ್ಲಿ `Irregular Cultivation' ಅಂತ ಹಾಕಿದರು. ಅಕ್ರಮ ಮತ್ತು ಇರೆಗ್ಯೂಲರ್ ಎಂದಿರುವುದರಿಂದ ನನಗೇ ಕನ್‌ಫ್ಯೂಸ್ ಆಯಿತು, ಪ್ರಶ್ನೆಯನ್ನು ಯಾವುದರಲ್ಲಿ ಕೇಳುವುದು ಎಂದು. ಇರೆಗ್ಯೂಲರ್‌ನಲ್ಲಿ ಕೇಳ ಬೇಕೋ, ಅಕ್ರಮದಲ್ಲಿ ಕೇಳಬೇಕೋ? ಸ್ವಲ್ಪ ತರ್ಜುಮೆ ಮಾಡುವಂತಹ ಸಂದರ್ಭದಲ್ಲಿ